ರೈತರೂ ಸಹ ಅವರ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಅವರೂ ಸಹ ಸಣ್ಣ ಸಣ್ಣ ಕೆರೆಗಳನ್ನು ನರಿಯಾಗಿ ಇಟ್ಟುಕೊಳ್ಳಬೇಕು ಎಂದು ಸರ್ಕಾರದವರು ಸಲಹೆ ಕೊಟ್ಟಿದ್ದಾರೆ.

ಶ್ರೀ ಕೆ. ವಿ. ಬೈರೇಗೌಡ.—ಕೆರೆಗಳನ್ನು ದುರಸ್ತು ಮಾಡಿ ನರಿಯಾದ ಸ್ಥಿತಿಯಲ್ಲಿಡುವುದು P.W.D.ಯವರ ಕರ್ತವ್ಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅವರೂ ಸಹ ಸಾಧ್ಯವಾದಷ್ಟು ಮಾಡುತ್ತಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಸಣ್ಣ ಸಣ್ಣ ಕೆರೆಗಳ ತೂಬನ್ನು ರಿಪೇರಿಮಾಡಲು ಏನಾದರೂ ನೀತಿಯನ್ನು ಅನುಸರಿಸುತ್ತಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಆದರೆ ತಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ಕಾಮಗಾರಿಗಳು ನಡೆದಿವೆ.

Unauthorised constructions of houses round about Bangalore.

Q.—415. Sri K. V. BYRE GOWDA (Bangalore North).—

Will the Government be pleased to state:—

(*a*) the action that is being taken to prevent the unauthorised construction of houses round about Bangalore (Belt Area);

(*b*) whether the unauthorised constructions have been regularised:

(*c*) the amount of fines so far collected in respect of such unauthorised constructions and the probable amount of conversion fines that may be recovered in respect of these constructions?

A.—(*a*) Sri Kadidal MANJAPPA (Minister for Revenue and Public Works).—A special staff has been appointed for the purpose and action is being taken to prevent unauthorised constructions in the Belt Aera.

(*b*) Not yet.

(*c*) Amount collected

Rs. 2,42,806-12-6.

Probable amount that may be recovered Rs. 5,91,265-13-0.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರು ಸುತ್ತ ಮುತ್ತಲೂ unauthorised construction ಆಗುತ್ತಿರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಇಂತಹ ಅನೇಕ slum ಗಳಿಂದ ಅಲ್ಲಿನ ಜನರಿಗೆ ಅನಾರೋಗ್ಯವುಂಟಾಗಿ ಸಾಂಕ್ರಾಮಿಕ ರೋಗಗಳು ಹರಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಂಕ್ರಾಮಿಕ ರೋಗಗಳು ಹರಡದಂತೆ ನೋಡಿಕೊಳ್ಳುವುದಕ್ಕಾಗಿ ವಿಶೇಷ ರೀತಿಯ ಸಿಬ್ಬಂದಿಯನ್ನು ನೇಮಕಮಾಡಲಾಗಿದೆ.

ಶ್ರೀ ಕೆ. ವಿ. ಬೈರೇಗೌಡ.—ಕೆಲವು ಕಡೆಗಳಲ್ಲಿ special staff ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಯಾರು ಅನಧಿಕೃತವಾಗಿ ಮನೆಗಳನ್ನು ಕಟ್ಟುತ್ತಿದ್ದಾರೋ ಅವರನ್ನೆಲ್ಲಾ quit ಮಾಡಿಸಿ, ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದರೆ, ಅವರಿಂದ conversion fine ವಸೂಲುಮಾಡಿ, ಅವರ ಮೇಲೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

1 P.M.

ಶ್ರೀ ಕೆ. ವಿ. ಬೈರೇಗೌಡ.—Unauthorised constructionsಬರಿಯ ಬೆಲ್ಟ್ ಪ್ರದೇಶದಲ್ಲೇ ಅಲ್ಲ, ಬೆಂಗಳೂರು ನಗರದ ಮಧ್ಯೆ ಕೂಡ ಇದೆ. ಇವುಗಳ ಸಂಬಂಧವಾಗಿ ಯಾವ ರೀತಿ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಕಟ್ಟಿರುವುದನ್ನು ಮಂಜೂರುಮಾಡಬೇಕೆಂದು ತಾವು ಕೇಳುವುದಾದರೆ, ಆ ರೀತಿ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ತಡೆಮಾಡುತ್ತೀರೋ ಅಥವಾ ಇನ್ನೇನಾದರೂ ಮಾಡುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಕಟ್ಟಿದವರ ಮೇಲೆ ರೆವಿನ್ಯೂ ಕೇಸ್ ಹಾಕುತ್ತಾರೆ.

R. C. C. Tank under construction at Davangere.

Q.—642. Sm. BELLARY SIDDAMMA (Davangere).—

Will the Government be pleased to state:—

(*a*) the reason as to why the work of the new R.C.C. Tank under construction at Davangere City is not expedited and completed early though the present supply of water in the city has been badly affected;

(*b*) whether they have not taken the responsibility of the said tank work?

A.— Sri Kadidal MANJAPPA (Minister for Revenue and Public Works).—

(*a*) The work was being executed by the Municipality till February 1955, from which date the P.W.D. took it over. It took some time for the connected records to be handed over to the P.W.D. and the balance claims of the previous contractor could only be settled by May 1955. Since then fresh tenders were called for, for the balance work and tender has also been approved. It will be executed as expeditiously as possible.

(*b*) The P.W.D. is now in charge of the work.